## 'ವಿಡುದಲೈ 2' ವಿಳಂಬ

ಜೈಮೋಹನ್ ಅವರ ಸಣ್ಣಕಥೆ ಆಧರಿಸಿದ 'ವಿಡುದಲೈ 2' ತಮಿಳು ಸಿನಿಮಾ ಅಂದುಕೊಂಡಂತೆ ಆಗಿದ್ದಿದ್ದರೆ ಈ ವರ್ಷದ ಅಂತ್ಯದೊಳಗೆ ತೆರೆಕಾಣಬೇಕಿತ್ತು. ಚಿತ್ರೀಕರಣ ಮುಂದುವರಿದಂತೆ ಯೋಜನೆಯ ಅವಧಿಯೂ ವಿಸ್ತರಣೆಗೊಳ್ಳುತ್ತಾ ಹೋಯಿತು.

'ನಾನು ಸಿನಿಮಾದ ಮೊದಲ ಭಾಗ ಮುಗಿಸಿದ ಮೇಲೆ ಎರಡನೇ ಭಾಗದ ಚಿತ್ರೀಕರಣವನ್ನು ಚಕಚಕನೆ ಮುಗಿಸಬಹುದು ಎಂದು ಭಾವಿಸಿದ್ದೆ. ಹಾಗೆ ಆಗಲಿಲ್ಲ. ಗುಣಮಟ್ಟಕ್ಕಾಗಿ ತಲೆಕೆಡಿಸಿಕೊಳ್ಳುತ್ತಾ ಚಿತ್ರಿಕೆಗಳನ್ನು ದಾಖಲಿಸಿಕೊಳ್ಳುವ ನನ್ನ ಜಾಯಮಾನದಿಂದಾಗಿಯೇ ನಿರೀಕ್ಷಿಸಿದ್ದ ಅವಧಿಯಲ್ಲಿ ಚಿತ್ರೀಕರಣ ಮುಗಿಯಲಿಲ್ಲ. ಈ ಸಿನಿಮಾ ಮುಗಿಯುವವರೆಗೆ ನನ್ನ ಮನಸ್ಸೆಲ್ಲ ಅದರಲ್ಲೇ ಇರುತ್ತದೆ' ಎಂದು ನಿರ್ದೇಶಕ ವೆಟ್ರಿಮಾರನ್ ಅನುಭವ ಹಂಚಿಕೊಂಡರು.




'ವಿಡುದಲೈ' ಸಿನಿಮಾದಲ್ಲಿ ಸೂರಿ, ವಿಜಯ್ ಸೇತುಪತಿ

ಇಳಯರಾಜಾ ಸ್ವರ ಸಂಯೋಜನೆ ಮಾಡಿರುವ 'ವಿಡುದಲೈ' ಸಿನಿಮಾದ ನಾಯಕನಾಗಿ ಸೂರಿ ಅಭಿನಯಿಸಿದ್ದಾರೆ. ವಿಜಯ್ ಸೇತುಪತಿ ಪಾತ್ರ ಏನಿರಬಹುದು ಎನ್ನುವ ಕುತೂಹಲವನ್ನು ಮೊದಲ ಭಾಗದ ಅಂತ್ಯದ ದೃಶ್ಯ ಮೂಡಿಸಿತ್ತು. ಆ ಕುತೂಹಲಕ್ಕೆ ಎರಡನೇ ಭಾಗದಲ್ಲಿ ಉತ್ತರ ಸಿಗಲಿದೆ. ತಣ್ಣಗೆ ದೃಶ್ಯಗಳನ್ನು ಕಟ್ಟುತ್ತಾ, ತೀವ್ರವಾದ ಅನುಭವವೊಂದನ್ನು ದಾಟಿಸುವ ಶೈಲಿಯ ನಿರೂಪಣೆ 'ವಿಡುದಲೈ' ಸಿನಿಮಾದಲ್ಲಿದೆ. ಮುಂದಿನ ವರ್ಷ ಬೇಸಿಗೆಯಲ್ಲಿ ಚಿತ್ರ ತೆರೆಕಾಣುವ ಸಾಧ್ಯತೆ ಇದೆ. ■



## ವಿದ್ಯುತ್ ಸಂಚಲನ

ನಟ ವಿದ್ಯುತ್ ಜಾಮ್ವಾಲ್ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಮೊನ್ನೆ ಮೊನ್ನೆ ಅವರ ಬೆತ್ತಲೆ ಫೋಟೊಗಳನ್ನು ನೋಡಿ ಅಭಿಮಾನಿಗಳು ಬಾಯಿಯ ಮೇಲೆ ಬೆರಳಿಟ್ಟುಕೊಂಡರು. ಹಿಮಾಲಯದ ತಪ್ಪಲಿನ ನದಿಯಲ್ಲಿ ಮೀಯುವಾಗ, ಅದರ ತಟದಲ್ಲಿ ಕುಳಿತು, ಕಾಲುಗಳನ್ನು ಇಳಿಬಿಟ್ಟು ಪ್ರಕೃತಿಯ ಜೊತೆ ಮಾತಿಗಿಳಿಯುವಾಗ ವಿದ್ಯುತ್ ಮೈಮೇಲೆ ತುಂಡು ಬಟ್ಟೆಯೂ ಇರಲಿಲ್ಲ. ಡಿಸೆಂಬರ್ 10ರಂದು ಅವರು ಹುಟ್ಟಿದ ದಿನ. ಅದಕ್ಕೂ ಈ ಫೋಟೊಗಳಿಗೂ ಒಂದು ಸಂಬಂಧವಿದೆ. ಅದನ್ನು ಅವರು ಆಧ್ಯಾತ್ಮಿಕ ಸಂಬಂಧ ಎಂದೇ ಹೇಳಿಕೊಂಡಿದ್ದಾರೆ.

ಹದಿನಾಲ್ಕು ವರ್ಷಗಳಿಂದ ಡಿಸೆಂಬರ್ ಬಂತೆಂದರೆ ವಿದ್ಯುತ್ ಹೀಗೆ ಹತ್ತು ದಿನ ಮನೆ ಬಿಟ್ಟು ಪ್ರಕೃತಿಯ ಮಡಿಲಿಗೆ ಹೊರಟುಬಿಡುತ್ತಾರೆ. ತಮ್ಮ ಐಷಾರಾಮಿ ಬದುಕಿನ ಎಲ್ಲದರಿಂದಲೂ ಮುಕ್ತನಾಗಿ ಹತ್ತು ದಿನ ತನ್ನನ್ನು ತಾನು ಕಂಡುಕೊಳ್ಳುತ್ತಾ ಮರುಹುಟ್ಟು ಪಡೆಯುವುದು ಇಂತಹ ಪ್ರವಾಸದ ಉದ್ದೇಶ. ಅದಕ್ಕೇ ಅವರು ಈ ಸಲ 'ಬರ್ತ್‌ಡೇ ಸೂಟ್' ಎಂದೇ ಕೆಲವರು ಲಘುವಾಗಿ ಹೇಳುವ, ಬೆತ್ತಲೆ ದೇಹದಲ್ಲಿ ಹಿಮಾಲಯದ ಮಡಿಲಿನಲ್ಲಿ ಇದ್ದುದು. ವಿದ್ಯುತ್ ಇದನ್ನು ಗಂಭೀರವಾಗಿಯೇ ಪರಿಗಣಿಸಿದ್ದಾರೆ.

'ನಾನು ಯಾರಲ್ಲ ಎಂದು ಅರಿಯುವ ಯತ್ನದ ಪ್ರವಾಸವಿದು. ಆ ಪ್ರಶ್ನೆಗೆ ಉತ್ತರ ಕಂಡುಕೊಂಡರೆ ನಾನು ಯಾರೆನ್ನುವುದೂ ಸ್ಪಷ್ಟವಾಗಿಬಿಡುತ್ತದೆ. ನಾನೊಂದು ಡಿಷ್ ಆ್ಯಂಟೆನಾ ಇದ್ದಂತೆ. ಸಿಗ್ನಲ್‌ಗಳನ್ನು ಹೀರಿಕೊಳ್ಳುವೆ, ಮತ್ತೆ ಗಾಳಿಯತ್ತ ಬಿಡುವೆ. ಸಹಾನುಭೂತಿ, ತಾದಾತ್ಮ್ಯ, ಸಾಧನೆ, ಕ್ರಿಯಾಶೀಲತೆ ಈ ಎಲ್ಲ ಫ್ರೀಕ್ವೆನ್ಸಿಗಳಲ್ಲಿಯೂ ನಾನು ವೈಬ್ರೇಟ್ ಆಗುವ ಪ್ರಕ್ರಿಯೆಯ ಪ್ರವಾಸ ಇದು' ಎಂದು ಅವರು ತಾತ್ವಿಕವಾದ ಪೋಸ್ಟ್ ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದರು.

ವಿದ್ಯುತ್ ತಮ್ಮ ತಾಯಿಯ ಗರಡಿಯಲ್ಲಿ ಬೆಳೆಯುತ್ತಾ, ಮಾರ್ಷಲ್ ಆರ್ಟ್ಸ್ ಕಲಿತವರು. ಈ ಕಲೆಯಲ್ಲಿ ಪಳಗಿದ್ದರಿಂದಲೇ ಅವರಿಗೆ ಸಿನಿಮಾಗಳಲ್ಲಿಯೂ ಅವಕಾಶ ಲಭಿಸಿದ್ದು. ಹುರಿಗಟ್ಟಿದ ದೇಹ, ಎತ್ತರದ ನಿಲುವು, ನೀಳ ಮುಂಗೂದಲು ತೆರೆಮೇಲೆ ಪ್ರೇಕ್ಷಕರು ಕಣ್ಣು ಕೀಲಿಸಿ ನೋಡುವಂತೆ ಮಾಡಿದವು. ಈಗಲೂ ಅವರು ವ್ಯಾಯಾಮ ತಪ್ಪಿಸುವುದಿಲ್ಲ. ಒಪ್ಪಿಕೊಳ್ಳುವ ಪಾತ್ರ ಯಾವುದೇ ಆದರೂ, ಅವರ ಹುರಿಗಟ್ಟಿದ ದೇಹವಂತೂ ಸಾಥ್ ನೀಡಲು ಇದ್ದೇ ಇರುತ್ತದೆ.

ಕ್ರೀಡಾ ಸಾಹಸಗಾಥೆಯ ಕಥನವನ್ನು ಒಳಗೊಂಡ 'Crakk' ಎಂಬ ಶೀರ್ಷಿಕೆಯ ಸಿನಿಮಾದಲ್ಲಿ ವಿದ್ಯುತ್ ಅಭಿನಯಿಸಿದ್ದಾರೆ. ಅರ್ಜುನ್ ರಾಮ್‌ಪಾಲ್, ನೋರಾ ಫತೇ, ಆ್ಯಮಿ ಜಾಕ್ಸನ್ ಕೂಡ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಸಿನಿಮಾ ಮುಂದಿನ ವರ್ಷ ಫೆಬ್ರುವರಿಯಲ್ಲಿ ತೆರೆಕಾಣಲಿದೆ. ಆದಿತ್ಯ ದತ್ ನಿರ್ದೇಶಿಸಿರುವ ಈ ಸಿನಿಮಾಗೆ ವಿದ್ಯುತ್ ಬಂಡವಾಳವನ್ನೂ ಹೂಡಿದ್ದಾರೆ. ■